


## ಸದಾ ಸರ್ವದಾ ಸ್ಫೂರ್ತಿ

'ಶಾಂತಪಥ ಸ್ಫೂರ್ತಿಗಾಥೆ' (ಸೆ. 19, ನೇಮಿಚಂದ್ರ) ಮುಖಪುಟ ಲೇಖನ ಸ್ಫೂರ್ತಿದಾಯಕವಾಗಿದೆ. 1960ರ ದಶಕದಲ್ಲಿ ಹೆಣ್ಣುಮಕ್ಕಳು ತಲೆ ಎತ್ತಿ ನಡೆಯದೆ ಗೋಣು ಕೆಳಹಾಕಿ ನಡೆಯುವ ಕಾಲ. ಅಂಥ ಸಮಯದಲ್ಲಿಯೇ ಮನೆಯವರ ವಿರೋಧದ ನಡುವೆಯೂ ತಾನಂದುಕೊಂಡಂತೆ ಸಾಧಿಸಿ ತೋರಿಸಿದ ಛಲಗಾತಿ ಮಹಿಳೆ ಶಾಂತಾ ವಿಜಯರಾಘವನ್ ಎಲ್ಲಾ ನಾರೀಮಣಿಯರಿಗೂ ಸದಾ ಸರ್ವದಾ ಸ್ಫೂರ್ತಿ. ಅವಕಾಶಗಳಿಗೆ ಕಾಯದೆ ಸಿಕ್ಕ ಅವಕಾಶವನ್ನು ಸಮರ್ಥವಾಗಿ ಉಪಯೋಗಿಸಿಕೊಂಡು, ಎಲ್ಲಾ ಅಡೆತಡೆಗಳನ್ನು ಮೀರಿದ ಅಪ್ರತಿಮ ಮಹಿಳೆಗೆ ಗೌರವ ನಮನ.

—ಉಷಾಲಕ್ಷ್ಮಿ ಅರವಿಂದ ಹೊಳ್ಳ, ಬೆಂಗಳೂರು

## ಹೆಮ್ಮೆ ಎನಿಸಿತು

'ಎಂಜಿನಿಯರರ ದಿನ'ದ ಅಂಗವಾಗಿ ಮೂಡಿಬಂದ ಲೇಖನ ಅದ್ಭುತ! ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ಗಗನಕುಸುಮವಾಗಿದ್ದ ಕಾಲದಲ್ಲಿ ಹಟದಿಂದ, ಆಸಕ್ತಿಯಿಂದ ಎಂಜಿನಿಯರಿಂಗ್ ಪದವಿ ಮುಗಿಸಿದ್ದಲ್ಲದೆ, ಉನ್ನತ ಕಂಪನಿಗಳಲ್ಲಿ ಕೆಲಸ ಮಾಡಿ, ಕೊನೆಗೆ ತಮ್ಮದೇ ಕಂಪನಿ ಸ್ಥಾಪಿಸುವ ಮಟ್ಟಕ್ಕೆ ಬೆಳೆದು ನಿಂತ ಶಾಂತಾ ಅವರ ಛಲ ಶ್ಲಾಘನೀಯ. ಇದಕ್ಕೆ ಒತ್ತಾಸೆಯಾಗಿ ನಿಂತ ಅವರ ಪತಿ ವಿಜಯರಾಘವನ್ ಕೂಡ ಅಭಿನಂದನಾರ್ಹರು. ಈ ಲೇಖನ ಓದಿ ಶಾಂತಾ ವಿಜಯರಾಘವನ್ ಅವರ ಬಗ್ಗೆ ಹೆಮ್ಮೆ ಎನಿಸಿತು.

—ಶೋಭಾ ಸಂಪತ್, ಬೆಂಗಳೂರು

## ರೋಚಕ, ಸಾಹಸ!

ಮಹಿಳೆಯರು ಓದುವುದೇ ಕಷ್ಟವೆನ್ನುವ ಪರಿಸ್ಥಿತಿಯಲ್ಲಿ ಎಂಜಿನಿಯರಿಂಗ್ ಮಾಡಿ ಸಾಹಸದಿಂದ ಸ್ವಂತ ಕಂಪನಿ ಕಟ್ಟಿ ಅದನ್ನು ಯಶಸ್ವಿಯಾಗಿ ನಡೆಸಿಕೊಂಡು ಬಂದ ಈ ದಂಪತಿ ರಾಜ್ಯ ಸರ್ಕಾರದ ಪುರಸ್ಕಾರಕ್ಕೆ ಅರ್ಹರಾಗಲಿಲ್ಲವೇ ಎನ್ನುವ ಅನುಮಾನ ಕಾಡಿತು. ಏನೇ ಆಗಲಿ ಈ ಎಂಜಿನಿಯರ್ ದಂಪತಿ ಅಭಿನಂದನಾರ್ಹರು.

—ಕೊ.ಸು. ನರಸಿಂಹಮೂರ್ತಿ, ಮೈಸೂರು

## ಸ್ಫೂರ್ತಿದಾಯಕ ಲೇಖನ

ಸ್ಫೂರ್ತಿದಾಯಕ ಲೇಖನ. ಚಿತ್ರಸಮೇತ ಬರವಣಿಗೆ, ಶಾಂತಾ ದಂಪತಿ ಭಾವಚಿತ್ರ, ಆ ಕಾಲದ ಸಾಧನೆ ಮನಮುಟ್ಟುವಂತಿತ್ತು. ಇಂಥ ಲೇಖನ ನಿರಂತರವಾಗಿ ಬರುತ್ತಿರಲಿ.

—ಶಾಂತಾರಾಮ ನಾಯ್ಕ, ಹೊನ್ನಾವರ

## ಮಹಿಳೆಯರಿಗೆ ಮಾದರಿ

ಮಹಿಳೆಯರಿಗೆ ಸ್ವಾತಂತ್ರ್ಯವೇ ಇಲ್ಲದ ದಿನಗಳಲ್ಲಿ ಶಾಂತಾ ಅವರು ಛಲ ಬಿಡದೆ ಕಷ್ಟಪಟ್ಟು ಅಷ್ಟೇ ಇಷ್ಟವಾಗಿ ಅವರ ಗುರಿ ಸಾಧಿಸಿಕೊಂಡಿರುವುದು ತುಂಬಾ ಹೆಮ್ಮೆಯ ವಿಷಯ. ಅವರ ಅಕ್ಕ ಉತ್ತೇಜಿಸಿದ್ದನ್ನೂ ನೆನೆಯಬೇಕು. ಲೇಖನ ಎಲ್ಲಾ ಮಹಿಳೆಯರಿಗೆ ಮಾದರಿ.

—ಸೀತಾ ಕೇಶವ ಸಿಡ್ಡಿ

## ಇಂಥವರ ಪರಿಚಯವಾಗಲಿ

ಕರ್ನಾಟಕದ ಮೊದಲ ಎಂಜಿನಿಯರ್ ದಂಪತಿಯ ಕಥನ, 60–70ರ ದಶಕದ ಎಂಜಿನಿಯರಿಂಗ್ ಕ್ಷೇತ್ರ ಹಾಗೂ ಅದರಲ್ಲಿನ ಸವಾಲುಗಳ ಮೇಲೂ ಬೆಳಕು ಚೆಲ್ಲಿದೆ. ತಮ್ಮದೇ ಸ್ವಂತ ಕಂಪನಿ ಕಟ್ಟಿ ಯಶಸ್ಸು ಪಡೆದ ಇವರಂತೆ ಇತರ ಕ್ಷೇತ್ರದ ಸಾಧಕರನ್ನೂ ಓದುಗರಿಗೆ ಪರಿಚಯಿಸಿ.

—ನರಸಿಂಹಮೂರ್ತಿ

## ಕಲ್ಪನೆ ಬದಲಾಯಿತು

'ಮರುಭೂಮಿಯಲ್ಲಿ ಹಣ್ಣು ಹೂವು' (ಸೆ. 19, ರಹಮತ್ ತರೀಕೆರೆ) ವಿಶಿಷ್ಟ ಬರಹವು ಮರುಭೂಮಿಯ ನನ್ನ ಕಲ್ಪನೆಯನ್ನೇ ಬದಲಾಯಿಸಿತು. ಹೀಗೂ ಇರುವ ಹಣ್ಣುಗಳ ಪ್ರಪಂಚವನ್ನು ಓದುಗರಿಗೆ ಕಟ್ಟಿಕೊಟ್ಟಿದ್ದಾರೆ.

—ಸಿ.ಆರ್. ಚಂಪಾ, ಚನ್ನಸಂದ್ರ

## ಸುಲಲಿತ ಭಾಷೆ

ಪ್ರವಾಸ ಲೇಖನ ತುಂಬಾ ಮನೋಹರವಾಗಿ ಮೂಡಿಬಂದಿದೆ. ಸುಲಲಿತ ಭಾಷೆ, ಸುಂದರ ಚಿತ್ರಗಳು ಓದುಗರ ಮನ ಸೆಳೆಯುತ್ತವೆ. ರಹಮತ್ ಅವರ ಲೇಖನಗಳೇ ಹಾಗೆ.

—ಬಚ್ಚೇಗೌಡ

## ಕೃತಕ ಬುದ್ಧಿಮತ್ತೆ!

'ಮುನಿಶಾಮಿ ಅಜ್ಜನೂ ತಂಗಲಾನ್ ಸಿನಿಮಾವೂ' (ಸೆ. 19, ಸುಬ್ರಹ್ಮಣ್ಯ ಎಚ್.ಎಂ.) ಲೇಖನ ಚೆನ್ನಾಗಿದೆ. ಬರಹದ ಜೊತೆಗಿನ ಆಕರ್ಷಕ ಚಿತ್ರಕ್ಕೆ ಕೃತಕ ಬುದ್ಧಿಮತ್ತೆ ಬಳಸಿರುವುದು ನೋಡಿ 'ಎಐ ಸುಧಾದಲ್ಲೂ ಸುಳಿಯಿತೇ!' ಎಂದೆನಿಸಿತು.

—ಭಾರತಿ ಪ್ರಭು



## ಪರಿಸರಪ್ರಜ್ಞೆ

'ಬೆಳ್ಳಣ್ಣನ ಜಲಕ್ರೀಡೆ' (ಸೆ. 19, ಎಸ್. ಶಿಶುಪಾಲ) ಲೇಖನ ಓದಿದೆ. ಅತ್ಯುತ್ತಮ ಫೋಟೊಗಳೊಂದಿಗೆ ಆ ಪುಟ್ಟ ಹಕ್ಕಿಗಳನ್ನು ಪರಿಚಯಿಸುವಾಗ ಓದುಗರಲ್ಲಿ ಪ್ರೀತಿಯನ್ನೂ ಕಾಳಜಿಯನ್ನೂ ಹುಟ್ಟಿಸುತ್ತಾರೆ. ಅವರ ಲೇಖನಗಳೂ ಪರಿಸರಪ್ರಜ್ಞೆಯನ್ನು ಹೆಚ್ಚಿಸುತ್ತವೆ.

—ಮೀರಾ ಜಿ., ಬೆಂಗಳೂರು

## ಮುದ್ದುಮುದ್ದಾದ ಚಿತ್ರಗಳು

ಮರವಾಸಿ ಬೆಳ್ಗಣ್ಣಗಳು ಜಲಕ್ರೀಡೆಯಲ್ಲಿ ಆನಂದಿಸುತ್ತಿರುವುದನ್ನು ಚಿತ್ತಾಕರ್ಷಕ ಫೋಟೊಗಳಲ್ಲಿ ಸೆರೆಹಿಡಿದು ಸುಂದರವಾಗಿ ಪ್ರಸ್ತುತಪಡಿಸಿದ ಲೇಖಕರಿಗೆ ಧನ್ಯವಾದ.

—ನೇತ್ರಾ ಪ್ರಸಾದ್, ಬೆಂಗಳೂರು

## ಮನಸೂರೆಗೊಂಡಿತು

ಮನಕ್ಕೆ ಮುದವಿತ್ತ ಚಂದದ, ಚಿಕ್ಕ, ಚೊಕ್ಕ ವಿವರಣಾತ್ಮಕ ಲೇಖನ. ಹಸಿರ ಮಡಿಲಿನಲ್ಲಿ ಜಳಕವಾಡುವ ಮುದ್ದು ಮುದ್ದಾದ ಬೆಳ್ಗಣ್ಣರ ಚಿತ್ರ ಮನಸೂರೆಗೊಂಡಿತು.

—ಸುಮನಾ

## ದೋಸೆ ವೈವಿಧ್ಯ!

'ಡೇಂಜರ್ ಜೋನ್'ನಲ್ಲಿ ದೋಸೆ' (ಸೆ. 19, ಪೂರ್ಣಿಮಾ ಭಟ್) ಲೇಖನ ಚೆನ್ನಾಗಿದೆ. ಪಾರಂಪರಿಕ ದೋಸೆಪ್ರಿಯರಿಗೆ ಇದು ಒಂದು ಸಂಗತಿ ಎನಿಸಿದರೂ ಹೊಸ ಪೀಳಿಗೆಯ ಜನರಿಗೆ, ವೈವಿಧ್ಯ ಬಯಸುವ ಯುವಕ ಯುವತಿಯರ ಪಾಲಿಗೆ ವಿವಿಧ ಬಗೆಯ ಖಾದ್ಯಗಳನ್ನು ಸೇರಿಸಿ ಮಾಡಿದ ದೋಸೆ ಪ್ರಿಯವಾಗುತ್ತಿದೆ. ರುಚಿಕಟ್ಟಾದ ದೋಸೆ ವಿದೇಶಗಳಲ್ಲೂ ಅನೇಕರ ಮೆಚ್ಚಿನ ಉಪಾಹಾರ. ಈಗ ಮನೆಯಲ್ಲಿ ದೋಸೆ ಮಾಡುವ ಸಂಸ್ಕೃತಿ ಕಡಿಮೆಯಾಗುತ್ತಿದೆ. ದೋಸೆಗೆ ಬೇಕಾದ ಹಿಟ್ಟು ಈಗ ಪ್ಯಾಕೆಟ್‌ಗಳಲ್ಲಿ ಸಿಗುತ್ತಿರುವುದರಿಂದ ಮಹಿಳೆಯರ ಪಾಲಿಗೆ ಸಮಯ ಉಳಿತಾಯವಾಗುವುದಾದರೂ ಹಿಟ್ಟಿನ ರುಚಿ ಮತ್ತು ಮನೆ ಅಡುಗೆಯ ಘಮಲು ಕಡಿಮೆ ಆಗಿದೆ.

—ಬಸಪ್ಪ ಯ. ಬಂಗಾರಿ, ಬೆಂಗಳೂರು





**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in